# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 07 ಬ್ಯಾಟರಾಯನಪುರ ವಾರ್ಡ್ ಸಮಿತಿ ಸಭೆಯ ನಡವಳಿ.

**ದಿನಾಂಕ 16.07.2022 ರಂದು ವಾರ್ಡ್ ಕಛೇರಿಯಲ್ಲಿ ಮದ್ಯಾಹ್ನ 03.00 ಗಂಟೆಗೆ ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

ವಾರ್ಡ್ ನಂ.07, ಬ್ಯಾಟರಾಯನಪುರ ವಾರ್ಡ್‌ಗೆ ಮಾನ್ಯ ಆಯುಕ್ತರ ಆದೇಶದಂತೆ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿರುವ ಶ್ರೀ.ಪ್ರಕಾಶ್.ಜಿ ರವರು ಸಭೆಯಲ್ಲಿ ಹಾಜರಿದ್ದು, ಈ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಗಮನ ಹರಿಸಿ, ಕೈಗೊಂಡಕ್ರಮದ ಬಗ್ಗೆ ಚರ್ಚಿಸಲಾಯಿತು.

### 1. ಘನತ್ಯಾಜ್ಯ ನಿರ್ವಹಣೆ:

1. ವಾರ್ಡ್ 07 ರಲ್ಲಿ ಘನತ್ಯಾಜ್ಯಾ ನಿರ್ವಹಣೆಗೆ ಸಂಬಂದಿಸಿದಂತೆ ಹೆಚ್ಚುವರಿ ಪೌರಕಾರ್ಮಿಕರನ್ನು ನಿಯೋಜಿಕೊಳ್ಳುವ ಕಡತ ಪ್ರಸುತ್ತ ವಿಶೇಷ ಆಯುಕ್ತರು ಘ.ನಿ ಬಿಬಿಎಂಪಿ ರವರಕಛೆರಿಯಲ್ಲಿಇರುವುದಾಗಿಕಿರಿಯಆರೋಗ್ಯ ಪರಿವೀಕ್ಷಕರು ತಿಳಸಿರುತ್ತಾರೆ.
2. ಘನತ್ಯಾಜ್ಯಾ ನಿರ್ವಹಣೆಗೆ ಸಂಬಂದಿಸಿದಂತೆ, ವಾರ್ಡ್‌ನಲ್ಲಿ ಹಸಿ/ಒಣತ್ಯಾಜ್ಯಾ ವಿಂಗಡಣೆ ಸಂಪರ್ಕವಾಗಿ ನಡೆಯುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.
3. ನೇತಾಜಿನಗರ 1ನೇ ಮುಖ್ಯರಸ್ತೆಯಲ್ಲಿ ತುದಿಯಲ್ಲಿರುವ ಬ್ಲಾಕ್‌ಸ್ಪಾಟ್‌ನಲ್ಲಿ ರಾತ್ರಿ ಸಮಯದಲ್ಲಿ ಕಸವನ್ನು ಎಸಯುವುದನ್ನು ತಡೆಗಟ್ಟಬೇಕೆಂದು ಕೋರಿರುತ್ತಾರೆ.
4. ಒಣ ತ್ಯಾಜ್ಯಘಟಕ ನಿರ್ಮಿಸಲು ಸ್ಥಳವನ್ನು ಗುರುತಿಸಲಾಗಿದ್ದು, ಅದರೇ ಇನ್ನು ಕಾಮಗಾರಿ ಶುರುಅಗದಿರುವ ಬಗ್ಗೆ ಗಮನಕ್ಕೆ ತರಲಾಯಿತು.

### 2. ಆರೋಗ್ಯ ಇಲಾಖೆ:

1. ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ನಲ್ಲಿಇರುವ Bulk generators and commercial establishments and apartments doing wet composting at their premises ಬಗ್ಗೆ ಮಾಹಿತಿಯನ್ನು ನೀಡಲು ಸಭೆಯಲ್ಲಿ ಮನವಿ ಮಾಡಲಾಯಿತು.
2. ಕಸವನ್ನು ಕಸ ಸಂಗ್ರಹಿಸುವ ವಾಹನಕ್ಕೆ ನೀಡದಿರುವವರ ಬಗ್ಗೆ ದಂಡವಿದಿಸುವಂತೆ ಕೋರಿರುತ್ತಾರೆ.
3. ಪ್ಲಾಸ್ಟಿಕ್ ಉಪಯೋಗಿಸುವುದು ನಿರ್ಭಂದಿಸಲಾಗಿದೆ. ಅದ್ದರಿಂದ ಬೀದಿ ಬದಿ ವ್ಯಾಪಾರಿಗಳಿಗೆ ಪ್ಲಾಸ್ಟಿಕ್ ಉಪಯೋಗಿಸುವವರಿಗೆ ದಂಡ ವಿದಸಬೇಕೆಂದು ಕೋರಲಾಯಿತು.
4. ಡೆಂಗ್ಯೂ ಖಾಯಿಲೆ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚುತಿರುತ್ತದೆ. ಅದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದೆ.

### 3. ಕಾಮಗಾರಿ ವಿಭಾಗ:

1. ರಸ್ತೆಗಳಲ್ಲಿ ಎಲ್ಲೆ ಆಗಲೀ ರಸ್ತೆ ಗುಂಡಿಗಳು ಕಂಡು ಬಂದರೆಕೂಡಲೇ ವಾರ್ಡ್‌ಕಛೇರಿಗೆ ತಿಳಿಸಲು ಸೂಚಿಸಿದೆ.

2. ಕಾಫೀ ಬೋರ್ಡ್ ಬಡಾವಣೆಯಲ್ಲಿ ಎಲ್ ಅಕರಾದ ಚರಂಡಿ ಮತ್ತು culvert ಗಳನ್ನು ನಿರ್ಮಿಸಿಕೊಡುವಂತೆ ಕೋರಿರುತ್ತಾರೆ.
3. ನೇತಾಜಿನಗರದಲ್ಲಿ ಮಳೆ ನೀರಿನ ಗುಂಡಿಯಿಂದ ನೀರು ಹೊರಬರುತ್ತಿರುತ್ತದೆ ಮತ್ತು ಅಲ್ಲಿಲ್ಲಿ ಸ್ಲಾಬ್‌ಗಳು ಮುರಿದು ಹೋಗಿರುವ ಬಗ್ಗೆ ಬಡಾವಣೆ ನಿವಾಸಿಗಳು ಗಮನಕ್ಕೆ ತಂದರು.
4. ಕಾಫೀ ಬೋರ್ಡ್ ಬಡಾವಣೆ ನೀರು ಲಿಕೇಜ್ ಅಗುತ್ತಿರುವುರಿಂದ ರಸ್ತೆಗಳು ಹಾಳಾಗುತ್ತಿರುತ್ತದೆ ಎಂದು ಬಡಾವಣೆ ನಿವಾಸಿಗಳು ಗಮನಕ್ಕೆ ತಂದರು.
5. ಸಂದ್ಯಾಗಪ್ಪ ಬಡಾವಣೆಯಲ್ಲಿ culvert ಗಳನ್ನು ನಿರ್ಮಿಸಿಕೊಡುವಂತೆ ನಿವಾಸಿಗಳು ಕೋರಿರುತ್ತಾರೆ.
6. ಸಂದ್ಯಾಗಪ್ಪ ಬಡಾವಣೆಯಲ್ಲಿನ ಚರಂಡಿಗಳಲ್ಲಿ ಹೂಳು ತೆಗೆಯುವಂತೆ ನಿವಾಸಿಗಳು ಕೋರಿರುತ್ತಾರೆ.
7. ವಾರ್ಡ್ ವ್ಯಾಪ್ತಿಯಲ್ಲಿ ಸಿಸಿಟಿವಿ ಕ್ಯಾಮೇರಾಗಳನ್ನು ಅಳವಡಿಸಿಕೊಡುವಂತೆ ಕೋರಿರುತ್ತಾರೆ.
8. ಕಾಫೀ ಬೋರ್ಡ್ ಬಡಾವಣೆಯ ಪಾದಚಾರಿ ಮಾರ್ಗದಲ್ಲಿ ಅನದೀಕೃತವಾಗಿ ಬೀದಿ ಬದಿ ವ್ಯಾಪಾರಿಗಳು ತಮ್ಮ ತಮ್ಮ ಅಂಗಡಿಗಳನ್ನು ಇಟ್ಟುಕೊಂಡಿದ್ದು, ಎಲ್ಲಾ ಅಂಗಡಿಗಳನ್ನು ತೆರವುಗೊಳಿಸಿಕೊಡಬೇಕೆಂದು ಬಡಾವಣೆಯ ನಿವಾಸಿಗಳು ಮನವಿಮಾಡಿದರು.
9. ನೇತಾಜಿನಗರದಲ್ಲಿ ಮಳೆ ನೀರು ರಸ್ತೆಗಳಲ್ಲಿ ನಿಂತಿದ್ದು, ರಸ್ತೆಯಲ್ಲಿ ನಿಂತಿರುವ ನೀರನ್ನು ಕಾಲಿಮಾಡಿಕೊಂಡಬೇಕೆ ಮತ್ತು ಇದಕ್ಕೆ ಶಾಶ್ವತ ಪರಿಹರವನ್ನು ಕೊಡಿಸಿಕೊಡಬೇಕೆಂದು ಕೋರಿದರು.

**4. <u>ವಿದ್ಯುತ್ (ಬೀದಿ ದೀಪಗಳ ನಿರ್ವಹಣೆ) ವಿಭಾಗ:</u>**

1. ಬೀದಿ ದೀಪಗಳ ನಿರ್ವಹಣೆ ಅತ್ಯಂತ ಪ್ರಮುಖವಾದ ಕೆಲಸವಾಗಿದ್ದು, ಬೀದಿ ದೀಪಗಳನ್ನು ಅದಷ್ಟು ಸುಸ್ಥಿತಿಯಲ್ಲಿಡುವುದು. ಪಂಪಾ ಬಡಾವಣೇ ಮತ್ತು ಬ್ಯಾಟರಾಯನಪುರ ಅಯ್ಯಪ್ಪ ದೇವಸ್ಥಾನದ ರಸ್ತೆಯಲ್ಲಿ ಬೀದಿ ದೀಪಗಳ ಕೊರತೆವಿರುವುದಾಗಿ ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿ ಆಳವಡಿಸಲಾಗಿರುವ ಎಲ್.ಇ.ಡಿ ವಿದ್ಯುತ್ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಕ್ರಮವಹಿಸುವುದು.
3. ವಾರ್ಡ್‌ಕಛೇರಿಯ ಆವರಣದಲ್ಲಿ ಒಂದು ವಿದ್ಯುತ್ ದೀಪವನ್ನು ಅಳವಡಿಸಬೇಕೆಂದು ತಿಳಿಸಲಾಯಿತು.
4. ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಕಡೆ ವಿದ್ಯುತ್ ದೀಪಗಳು ಹಗಲು ಸಮಯದಲ್ಲಿಯು ಸಹ ಉರಿಯುತ್ತಿರುವುದರ ಬಗ್ಗೆ ಸಭೆಯಲ್ಲಿ ಗಮನಕ್ಕೆ ತರಲಾಯಿತು.

**5. <u>ಜಲಮಂಡಳಿ ವಿಭಾಗ:</u>**

1. ವಾರ್ಡ್ ವ್ಯಾಪ್ತಿಗೆ ಪ್ರತ್ಯೇಕವಾಗಿ ಹೂಳು ತೆಗೆಯುವ ವಾಹನವನ್ನು ನಿಗದಿಪಡಿಸಿಕೊಡಬೇಕೆಂದು ಸಭೆಯಲ್ಲಿ ಒಮ್ಮತ್ತದಿಂದ ಎಲ್ಲರೂ ಕೋರಿರುತ್ತಾರೆ.
2. ಕುವೆಂಪು ಬಡಾವಣೆ ನಾಗರೀಕರ ಕ್ಷೇಮಾಭಿವೃದ್ಧಿ ಸಂಘ (ರಿ) ರವರು ತಮ್ಮ ಬಡಾವಣೆಗೆ ಹೊಸದಾಗಿ ಒಳಚರಂಡಿ ಸಂಪರ್ಕವನ್ನು ಅಳವಡಿಸಲು ಅನುದಾನ ನಿಗದಿಪಡಿಸಿಕೊಡುವಂತೆ ಕೋರಿರುತ್ತಾರೆ. ಅದರಂತೆ ಈ ಸಾಲಿನ ಬಿಬಿಎಂಪಿ ಆಯವ್ಯಯದ 2022-23ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-3726ರ ಅನುದಾನದಡಿಯಲ್ಲಿ ಸದರಿ ಕಾಮಗಾರಿಯನ್ನು ನಿರ್ವಹಿಸಲು ಅನುದಾನವನ್ನು ನಿಗದಿಪಡಿಸಲಾಗಿದೆ.

ಕಾರ್ಯದರ್ಶಿ

ವಾರ್ಡ್ 07